ಶ್ರೀ ಬಿ. ರಮಾನಾಥ ರೈ : ನಾಳೆ ಉತ್ತರವನ್ನು ಕೊಡುತ್ತೇನೆ.

ಅಧ್ಯಕ್ಷರು : ಈಗ ಒಂದು ಮಾತನ್ನು ಹೇಳುತ್ತೇನೆ ಕೇಳಿ. ಈಗ ಅರಣ್ಯ ಇಲಾಖೆಯನ್ನು ಅಷ್ಟು ಸುಲಭವಾಗಿ ಬಗ್ಗಿಸುವುದಕ್ಕೆ ಆಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳೆ, ಒಂದು ಸಣ್ಣ ವಿಚಾರ ಹೇಳುತ್ತೇನೆ ಕೇಳಿ. ನಮ್ಮ ಸಾಗರ–ಶಿವಮೊಗ್ಗದಲ್ಲಿ ಒಂದು ಸಣ್ಣ ಬ್ರಿಡ್ಜ್ ಇದೆ. ಅದಕ್ಕೆ ಕೇವಲ ಒಂದು ಎಕರೆ ಭೂಮಿಯನ್ನು release ಮಾಡಿಕೊಡಬೇಕು. ಇದಕ್ಕೆ ಎಷ್ಟು ವರ್ಷ ಬೇಕು ? ಈಗಾಗಲೇ N.H. ನವರಿಂದ bridge sanction ಆಗಿ ಟೆಂಡರ್ ಕರೆದಾಗಿದೆ. ಆರು ತಿಂಗಳಾದರೂ ಒಂದು ಎಕರೆ ಭೂಮಿಯನ್ನು release ಮಾಡುವುದಿಲ್ಲವೆಂದರೆ ಹೇಗೆ ? ನಾನು ಇದನ್ನು ಹೇಳುವಂಗಿಲ್ಲ, ಅನುಭವಿಸುವುದು ತೀರುವುದಿಲ್ಲ. ಆದುದರಿಂದ ನೀವು ಸ್ವಲ್ಪ ಅವರನ್ನು ತರಾಟೆಗೆ ತೆಗೆದುಕೊಳ್ಳದಿದ್ದರೆ ಆಗುವುದಿಲ್ಲ. Clearance ಗೆ central government ಗೆ ಹೋಗಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಹತ್ತು ಎಕರೆಯವರೆಗೂ ಅನುಮತಿ ಕೊಡುವ ಅಧಿಕಾರ ಇಲ್ಲೇ ಇದೆ. Government of India C.C.F. ಗೆ ಇದೆ. ಅವರಿಗೆ ಕಳುಹಿಸಿದರಾಯಿತು, ಅವರ consent ಅಷ್ಟೇ ಬೇಕಿರುವುದು. ಅದು grant ಕೂಡ ಅಲ್ಲ, ಕೇವಲ consent.

ಶ್ರೀ ಬಿ. ರಮಾನಾಥ ರೈ : ಮಾನ್ಯ ಅಧ್ಯಕ್ಷರೆ, procedure ಪ್ರಕಾರ diversion ಗೆ ಕೇಳಿದರೆ ಅದು ನಮ್ಮ ಗಮನಕ್ಕೆ ಬಂದರೆ ಖಂಡಿತವಾಗಿ ತಮಗೆ, ಈಗ ತಾವೇನು ಹೇಳಿದ್ದೀರಿ, ಅದನ್ನು ಮಾಡಲು ಇಲ್ಲಿಯೇ ಅದರ ಕಛೇರಿ ಇದೆ. ಕೇಂದ್ರ ಸರ್ಕಾರದ ಪರಿಸರ ಇಲಾಖೆಯ ಕಛೇರಿ ಇಲ್ಲಿಯೇ ಇದೆ. ನಿಮ್ಮ ಸಲಹೆ ಏನಿದೆ, ಆ ಪ್ರಕಾರ ಮಾಡಲು ಅಗತ್ಯ ದಾಖಲೆಗಳನ್ನು ಕಳುಹಿಸಿಕೊಡಿ.

ಅಧ್ಯಕ್ಷರು : ನಾಳೆ ನಿಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಾಚೇನಹಳ್ಳಿ ಮತ್ತು ಮೂರನೇ ಹಂತದ್ದು ಏನಾಗಿದೆ ಎಂಬ ಬಗ್ಗೆ ಎರಡೂ ಸೇರಿ ಒಟ್ಟಿಗೆ ಉತ್ತರವನ್ನು ನಾಳೆ ಹೇಳಲಿ.

ಅಧ್ಯಕ್ಷರು : ಆಯಿತು. ಈಗ ಒಂದು ಪ್ರಕಟಣೆ ಇದೆ.

9. ಪ್ರಕಟಣೆ

ದಿನಾಂಕ : 15–12–2014 ರಿಂದ 20–12–2014 ರವರೆಗೆ ಸುವರ್ಣ ವಿಧಾನಸೌಧದ ಸಮ್ಮೇಳನಾ ಸಭಾಂಗಣದಲ್ಲಿ ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ ವತಿಯಿಂದ ಹಕ್ಕಿಗಳು ಹಾಗೂ ಕೀಟಗಳು ಕುರಿತಂತೆ ಪರಿಸರ ಪ್ರಜ್ಞೆ ಬಿಂಬಿಸುವ ಛಾಯಾ ಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿರುತ್ತದೆ. ಆದುದರಿಂದ ಮಾನ್ಯ ಸದಸ್ಯರುಗಳು ಪ್ರದರ್ಶನದ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ಈ ಮೂಲಕ ತಿಳಿಯಪಡಿಸಲಾಗಿದೆ.

ಶ್ರೀ ಕೆ. ಶಿವಮೂರ್ತಿ : ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆ ಕಲಾಪ ತೆಗೆದುಕೊಳ್ಳಲು ಕಳೆದ ನಾಲ್ಕು ದಿವಸದಿಂದ ಕೇಳುತ್ತಿದ್ದೇವೆ.

ಅಧ್ಯಕ್ಷರು : ಬಂದೆ, ಬಂದೆ, ಈಗ ಇನ್ನೊಂದು ಪ್ರಕಟಣೆಯಿದೆ.

10. ಪ್ರಕಟಣೆ

"ವಿಧಾನ ಪರಿಷತ್ತಿನಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118 ರ ಮೇರೆಗೆ 2014 ನೇ ಸಾಲಿನ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಎರಡನೇ ತಿದ್ದುಪಡಿ ವಿಧೇಯಕವನ್ನು ಈ ದಿನ ದಿನಾಂಕ : 16–12–2014 ರಂದು ಅಂಗೀಕರಿಸಿದೆಯೆಂದು ತಿಳಿಸಿರುತ್ತಾರೆ."

ಶ್ರೀ ಬಿ.ಆರ್. ಪಾಟೀಲ್ : ಈಗ ಶೂನ್ಯ ವೇಳೆ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಈಗ ಟೈಂ ಎಷ್ಟಾಯಿತು ನೋಡಿ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ 12ನೇ ತಾರೀಖಿಗೆ ಹಾಕಿದ್ದೀರಿ. ಮತ್ತೆ 14 ನೇ ತಾರೀಖಿಗೆ ಹಾಕಿದ್ದಿರಿ. 15ನೇ ತಾರೀಖಿಗೂ ಹಾಕಿದಿರಿ. ಈಗ ಮತ್ತೆ ,,,

ಅಧ್ಯಕ್ಷರು : ಆಯಿತು ಈಗ ಏನು ಕೇಳಬೇಕು ಎಂದಿದ್ದೀರೋ ಅದನ್ನು ಈಗ ಕೇಳಿ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ : ಹುತಾತ್ಮರಾದ ಮಲ್ಲಿಕಾರ್ಜುನ ಬಂಡೆಯವರ ಕುಟುಂಬಕ್ಕೆ ಸರ್ಕಾರ ಘೋಷಣೆ ಮಾಡಿದಂತೆ ಸವಲತ್ತುಗಳನ್ನು ಒದಗಿಸುವ ಬಗ್ಗೆ.

ಶ್ರೀ ಬಿ.ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಿನ್ನೆ 15ನೇ ತಾರೀಖಿಗೆ ಕಳೆದ ವರ್ಷ ಮಲ್ಲಿಕಾರ್ಜುನ ಬಂಡೆಯವರು ಹುತಾತ್ಮರಾಗಿ ಒಂದು ವರ್ಷವಾಯಿತು. ಮಾನ್ಯ ಸರ್ಕಾರದವರು ಬಹಳ ಮುಕ್ತವಾಗಿ ಅವರಿಗೆ ಏನೇನು ಸವಲತ್ತುಗಳು, ಅನುಕೂಲಗಳು, ಸೌಲಭ್ಯಗಳನ್ನು ಮಾಡಿಕೊಡಬೇಕು ಎನ್ನುವುದರ ಬಗ್ಗೆ ತಾವು ಘೋಷಣೆ ಮಾಡಿದ್ದೀರಿ. ತಾವು ಮೊನ್ನೆ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಬಂದಾಗ ಅವರಿಗೆ ಸೈಟ್‌ನ್ನು ಕೊಡುತ್ತೇನೆ ಎಂದು ಹೇಳಿದ್ದೀರಿ. ಬಹಳ ಸಂತೋಷ. ಆದರೆ ಅವರು ಸರ್ಕಾರಿ ಸೇವೆಯಲ್ಲಿದ್ದು ಎಷ್ಟು ವರ್ಷಗಳ ಕಾಲ ಅವರು ಕಾಲ ಕಳೆಯುತ್ತಿದ್ದರೋ ಅಷ್ಟು ವರ್ಷಗಳ ಸಂಬಳವನ್ನು ಕೊಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಟ್ಟಿದ್ದೀರಿ ಮತ್ತು ಅವರ ಮಕ್ಕಳ ಶಿಕ್ಷಣದ ಸಂಪೂರ್ಣವಾದ ವ್ಯವಸ್ಥೆಯನ್ನು ಮಾಡಿಕೊಡುತ್ತೇವೆ ಎನ್ನುವಂಥ ಮಾತನ್ನು ಕೂಡ ತಾವು ಹೇಳಿದ್ದಿರಿ. ಇಲ್ಲಿಯವರೆಗೆ ಮೊನ್ನೆ ಕ್ಯಾಬಿನೆಟ್‌ನಲ್ಲಿ ಸೈಟ್‌ನ್ನು ಕೊಡುವುದರ ಬಗ್ಗೆ